3) ಬೆಂಗಳೂರು ನಗರ ಜಿಲ್ಲಾ ಕೇಂದ್ರ ಗ್ರಂಥಾಲಯ

4) ನಗರ ಕೇಂದ್ರ ಗ್ರಂಥಾಲಯ ಹಾಗೂ ಜಿಲ್ಲಾ ಕೇಂದ್ರ ಗ್ರಂಥಾಲಯ, ಗುಲ್ಬರ್ಗಾ

5) ಜಿಲ್ಲಾ ಕೇಂದ್ರ ಗ್ರಂಥಾಲಯ, ಬೀದರ್

6) ನಗರ ಕೇಂದ್ರ ಗ್ರಂಥಾಲಯ, ಮಂಗಳೂರು.

7) ಜಿಲ್ಲಾ ಕೇಂದ್ರ ಗ್ರಂಥಾಲಯ, ಚಿಕ್ಕಮಗಳೂರು

8) ಜಿಲ್ಲಾ ಕೇಂದ್ರ ಗ್ರಂಥಾಲಯ, ಶಿವಮೊಗ್ಗ

9) ಜಿಲ್ಲಾ ಕೇಂದ್ರ ಗ್ರಂಥಾಲಯ, ಕೋಲಾರ

10) ಜಿಲ್ಲಾ ಕೇಂದ್ರ ಗ್ರಂಥಾಲಯ, ರಾಯಚೂರು

11) ನಗರ ಕೇಂದ್ರ ಗ್ರಂಥಾಲಯ, ದಾವಣಗೆರೆ

12) ರಾಜ್ಯ ಕೇಂದ್ರ ಗ್ರಂಥಾಲಯ, ಬೆಂಗಳೂರು.

ಈ) ರಾಜ್ಯದ ಎಲ್ಲಾ ಗ್ರಂಥಾಲಯಗಳು ಸೇರಿ 1994-95ನೇ ಸಾಲಿನಲ್ಲಿ 3815 ಗ್ರಂಥಗಳಿಗಾಗಿ ರೂ. 1,37,091-00ಗಳನ್ನು ಭರಿಸಲಾಗಿದ್ದು, ಅದೇ ರೀತಿ 1995-96ನೇ ಸಾಲಿನಲ್ಲಿ 9066 ಗ್ರಂಥ-ಗಳಿಗಾಗಿ ರೂ. 3,28,100-00ಗಳನ್ನು ಭರಿಸಲಾಗಿದೆ.

ವಿಷಯ:- ಚಿಕ್ಕಮಗಳೂರು ಜಿಲ್ಲೆಯಲ್ಲಿ ಚಿರತೆ ಮತ್ತು ಆನೆ ಹಾವಳಿಯಿಂದ ಉಂಟಾದ ಹಾನಿ

1339 (2075) **ಶ್ರೀ ಸಿ.ಆರ್. ಸಗೀರ್ ಅಹಮದ್ (ಚಿಕ್ಕಮಗಳೂರು):-** ಮಾನ್ಯ ಅರಣ್ಯ ಸಚಿವರು ಈ ಕೆಳ ಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಚಿಕ್ಕಮಗಳೂರು ಜಿಲ್ಲೆಯಲ್ಲಿ ಚಿರತೆ ಮತ್ತು ಆನೆ ಹಾವಳಿಯಿಂದ ಜನರ ಪ್ರಾಣ ಹಾನಿ-ಯಾಗಿರುವ ಬಗ್ಗೆ ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಆ) 1994-95, 1995-96 ನೇ ಸಾಲಿನಲ್ಲಿ ಎಷ್ಟು ಜನರ ಪ್ರಾಣ ಹಾನಿಯಾಗಿದೆ?

ಇ) ಹಾನಿಯಾಗಿರುವ ವ್ಯಕ್ತಿಗಳಿಗೆ ಸರ್ಕಾರ ಪರಿಹಾರ ನೀಡಿದೆಯೇ?

ಈ) ಜಿಲ್ಲೆಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಚಿರತೆ ಮತ್ತು ಆನೆ ಹಾವಳಿಯಿಂದ ಜೀವನ ಹಾನಿ-ಯಾಗುತ್ತಿರುವ ಬಗ್ಗೆ ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಅರಣ್ಯ ಸಚಿವರು):-

ಅ) ಹೌದು

ಆ)

	ಕಾಡಾನೆಯಿಂದ	ಚಿರತೆಯಿಂದ
1994-95	4	ಇಲ್ಲ

1995-96	3	5
1996-97	ಇಲ್ಲ	5

(31-7-96 ರ ವರೆಗೆ)

ಇ) ಚಿರತೆಯ ಹಾವಳಿಯಿಂದ ಮೃತರಾದವರ ವಿವರ ಈ ಕೆಳಕಂಡಂತಿದೆ:

1. ಕು. ಕವಿತ
2. ಶ್ರೀಮತಿ ಲಕ್ಷ್ಮಮ್ಮ
3. ಕು. ಗಿರೀಶ್
4. ಕು. ಶ್ರೀನಿವಾಸ
5. ಕು. ಲತಾ
6. ಶ್ರೀಮತಿ ಗಂಗೂ ಬಾಯಿ
7. ಕು. ರವಿನಾಯ್ಕ

ಈ ನಾಲ್ಕು ಜನ ಮೃತರ ವಾರಸುದಾರರಿಗೆ ತಲಾ ರೂ. 25,000 ಗಳಂತೆ ಪೂರ್ಣ ಪರಿಹಾರ ಧನವನ್ನು ನೀಡಲಾಗಿದೆ.

ಈ ಮೂರು ಜನ ಮೃತರ ವಾರಸುದಾರರಿಗೆ ರೂ. 10,000 ಗಳನ್ನು ನೀಡಿದ್ದು ಉಳಿದ ರೂ. 15,000 ಪರಿಹಾರ ಮೊತ್ತವನ್ನು ನೀಡಲು ಆದಷ್ಟು ಬೇಗ ಕ್ರಮಕೈಗೊಳ್ಳಲಾಗುವುದು.

8. ಶ್ರೀ ಲಾಲ್ಯಾನಾಯ್ಕ

ಆನಾರೋಗ್ಯದ ಕಾರಣದಿಂದ ಈ ವ್ಯಕ್ತಿ ಮೃತಪಟ್ಟಿರುವುದಾಗಿ ಶವ ಪರೀಕ್ಷೆಯ ವರದಿಯಿಂದ ತಿಳಿದು ಬಂದಿರುವುದಾಗಿ ಸೂಪರಿಂಟೆಂಡ್ ಆಫ್ ಪೋಲೀಸ್, ಚಿಕ್ಕಮಗಳೂರು, ಇವರಿಂದ ತಿಳಿದು ಬಂದಿರುತ್ತದೆ.

ಚಿರತೆಯ ಹಾವಳಿಯಿಂದ ಗಾಯಗೊಂಡಿರುವವರ ವಿವರ:-

1. ಶ್ರೀ ಕೃಷ್ಣ ನಾಯಕಾ
2. ಶ್ರೀ ಚಂದ್ರ ಭೋವಿ

ತಲಾ 1,000 ರೂಪಾಯಿಗಳನ್ನು ಪರಿಹಾರ ಧನವಾಗಿ ನೀಡಲಾಗಿದೆ.

ಕಾಡಾನೆಯ ಹಾವಳಿಯಿಂದ ಮೃತರಾದವರ ವಿವರ:

1. ಶ್ರೀ ಲೂಯಿಸ್ ಡಿಸೋಜ
2. ಶ್ರೀ ಕುಪ್ಪ
3. ಶ್ರೀಮತಿ ಗಂಗಮ್ಮ
4. ಶ್ರೀ ನಾಗರಾಜು
5. ಶ್ರೀ ಕೃಷ್ಣಮೂರ್ತಿ
6. ಶ್ರೀಮತಿ ದೊಡಮ್ಮ
7. ಶ್ರೀ ಮಾದ

ಮೃತರ ವಾರಸುದಾರರಿಗೆ ರೂ. 25,000 ಪೂರ್ಣ ಪರಿಹಾರವನ್ನು ನೀಡಲಾಗಿದೆ.

ಈ) ನರಭಕ್ಷಕ ಚಿರತೆಯನ್ನು ಹಿಡಿಯವ: ಕೊಲ್ಲುವ ಪ್ರಯತ್ನದಲ್ಲಿ ಅರಣ್ಯ ಸಿಬ್ಬಂದಿ ಹಾಗೂ ಪರಿಣಿತ ತಂಡದವರು ಹಗಲು–ರಾತ್ರಿ ಎನ್ನದೆ 1995 ರಿಂದ ಇಲ್ಲಿಯತನಕ ಪೋಲೀಸ್ ಇಲಾಖೆಯ ಸಹಕಾರದೊಂದಿಗೆ ಕಾರ್ಯಮಗ್ನರಾಗಿರುತ್ತಾರೆ. ಸಾರ್ವಜನಿಕರು ಸಹ ಈ ಕಾರ್ಯದಲ್ಲಿ ಶ್ರಮವಹಿಸಿ ಇಲಾಖೆಯೊಂದಿಗೆ ಸಹಕರಿಸುತ್ತಿದ್ದಾರೆ. ಚಿರತೆಗಳನ್ನು ಜೀವಂತವಾಗಿ ಹಿಡಿಯುವ ಬಗ್ಗೆ ಅವುಗಳ ಚಲನವಲನದ ಹಾದಿ ಬದಿಯಲ್ಲಿ ಬೋನುಗಳನ್ನು ಇಡಲಾಗಿದೆ ಹಾಗೂ ನರಭಕ್ಷಕ ಚಿರತೆಯಿಂದ ಪಾರಾಗುವ ಬಗ್ಗೆ ಹೆಚ್ಚಿನ ತಿಳುವಳಿಕೆಯನ್ನು ಮಾಹಿತಿಗಳನ್ನು ಅರಣ್ಯ ಇಲಾಖೆಯ ಮುಖಾಂ ತರ ಮುದ್ರಿಸಿ ಚಿರತೆ ಹಾವಳಿಯಿರುವ ಹಳ್ಳಿಗಳಲ್ಲಿ ಹಂಚಲಾಗಿರುತ್ತದೆ.

ವಿಷಯ:- ರಾಜ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯವರು ಖರೀದಿಸಿದ ಔಷಧಿಗಳು.

1340 (2245) **ಶ್ರೀ।। ಶ್ರೀಕಾಂತ ಅಂಬಡಗಟ್ಟಿ (ಧಾರವಾಡ ಗ್ರಾಮಾಂತರ):-** ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖಾ ವತಿಯಿಂದ ಕಳೆದ 3 ವರ್ಷಗಳಿಂದ ಖರೀದಿಸಿದ ಔಷಧಿಗಳೆಷ್ಟು? ಅವುಗಳಲ್ಲಿ ಕಳಪೆ ಗುಣಮಟ್ಟದ ಔಷಧಿಗಳನ್ನು ತಿರಸ್ಕರಿಸಿ ಕ್ರಮ ಕೈಗೊಳ್ಳಲಾಗಿರುವ ಬಗ್ಗೆ ವಿವರ ನೀಡುವುದು?

ಆ) ರಾಜ್ಯದ ಅನೇಕ ಸರ್ಕಾರಿ ಆಸ್ಪತ್ರೆಗಳಲ್ಲಿ ಇಲಾಖೆಯ ವತಿಯಿಂದ ಖರೀದಿಸಲಾದ ಔಷಧಿಗಳನ್ನು ವೈದ್ಯರು ಗುಣಮಟ್ಟ ಸರಿ ಇಲ್ಲದಿರುವ ವಿಷಯವನ್ನು ಸರ್ಕಾರದವರ ಗಮನಕ್ಕೆ ತರಲಾಗಿದೆಯೇ? ಹಾಗಿದ್ದರೆ ಈ ಬಗ್ಗೆ ತೆಗೆದುಕೊಂಡ ಕ್ರಮಗಳೇನು?

ಇ) ಕಳಪೆ ಗುಣಮಟ್ಟದ ಔಷಧಿಗಳನ್ನು ಸರಬರಾಜು ಮಾಡಿರುವ ಕಂಪನಿಗಳಾವುವು? ಹಾಗೂ ಎಷ್ಟು ಮೊತ್ತದ ಹಣದ ಔಷಧಿಯನ್ನು ಸರಬರಾಜು ಮಾಡಿರುತ್ತಾರೆ; ಈ ಬಗ್ಗೆ ಇಲಾಖೆಯವರು ತೆಗೆದುಕೊಂಡ ಕ್ರಮಗಳಾವುವು?

ಡಾ: ಹೆಚ್.ಸಿ. ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):-

ಅ) ಕಳೆದ ಮೂರು ವರ್ಷಗಳ ಸಾಲಿನಲ್ಲಿ ಸರ್ಕಾರಿ ಔಷಧಿ ಮಳಿಗೆ, ಬೆಂಗಳೂರು ಇಲ್ಲಿಗೆ ಬಿಡುಗಡೆಯಾದ ಅನುದಾನದ ಮೊತ್ತದಲ್ಲಿ ಖರೀದಿ ಮಾಡಲಾದ ಔಷಧಿಗಳ ಮೌಲ್ಯವು ಈ ಕೆಳಕಂಡಂತಿರುತ್ತದೆ:-

ವರ್ಷ	ಖರೀದಿಸಲಾದ ಔಷಧಿಗಳ ಮೊತ್ತ
1993-94	ರೂ. 22,04,53,532.00
1994-95	ರೂ. 24,27,39,341.00
1995-96	ರೂ. 23,38,08,038.00